# ಕಾಲ–ಕಾಲಾತೀತ

**ಡಾ. ಶ್ರೀರಾಮ ಭಟ್ಟ**

## ಕಾಲದ ಗಣನೆ

ಈ ಜಗದ ನಿರಂತರ ಅನುಸಂಧಾನದ ವಿಷಯದಲ್ಲಿ ಕಾಲಕ್ಕೆ ಪ್ರಥಮ ಪ್ರಾಶಸ್ತ್ಯವಿದೆ. ಅನ್ನ, ನೀರು, ವಸನ, ವಾಸ, ಕಾಮಕೂಟಗಳಂತೆ ಭೌತಿಕ ಮೂರ್ತದ ಬೇಡಿಕೆ ಅಲ್ಲ ಇದು. ಆದರೂ ಅವುಗಳೊಡನೆ ನಿರಂತರವಾಗಿ ಕಾಡುವ ಅಥವಾ ಹಂಬಲಿಸುವ ವಿಶಿಷ್ಟ ಅಮೂರ್ತ ಸಂಕಲ್ಪವೇ ಕಾಲ. ಬೆಳಗ್ಗೆ ಏಳುವಾಗಲೇ ಗಂಟೆ ಎಷ್ಟಾಯ್ತು ಎಂದು ಹುಡುಕುತ್ತೇವೆ. ರಾತ್ರಿ ಹನ್ನೊಂದಾಗಿ ಹೋಯಿತೇ ಎನ್ನುತ್ತಲೇ ಮಲಗುತ್ತೇವೆ. ಎದ್ದು ಮಲಗುವ ಮಧ್ಯೆ ಪ್ರತಿಯೊಂದಕ್ಕೂ ಗಂಟೆಯನ್ನು ನೋಡುತ್ತೇವೆ. ಏನಿದು ಗಂಟೆ? ಅದೇ ಕಾಲ. ಕಾಲ ಎಂದೊಡನೆ ಗಂಟೆಯ ಮೂಲಕ ಕಾಲವನ್ನು ಸೂಚಿಸುವ ಗಡಿಯಾರವೇ ಕಣ್ಮುಂದೆ ಕಾಣುತ್ತದೆ.

**ಗಂಟೆಯ ನೆಂಟನೆ ಓ ಗಡಿಯಾರ**
**ಹೊತ್ತನು ತಿಳಿಯಲು ನೀನಾಧಾರ**
**ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್**

ಕನ್ನಡ ಶಾಲೆಯಲ್ಲಿ ಕಲಿಸಿದ ಪದ್ಯ ಇದು. ಕಾಲ ಬದಲಾಗಿದೆ. ಟಿಕ್ ಟಿಕ್ ಸದ್ದಿಲ್ಲದೆಯೇ ಧಾವಿಸುವ ಬಗೆ ಬಗೆ ಬಣ್ಣದ ತರಾವರಿ ಆಕಾರದ ಗಡಿಯಾರಗಳು ಇಂದು ಎಲ್ಲೆಲ್ಲೂ ರಾರಾಜಿಸುತ್ತಿವೆ. ಗಡಿಯಾರ ಬದಲಾಯಿತು. ಕಾಲ ಬದಲಾದೀತೆ? ಗಡಿಯಾರವೇ ಕಾಲ ಅಲ್ಲವಲ್ಲ! ಹಾಗಾದರೆ ಕಾಲ ಎಂದರೇನು? ಕಾಲವನ್ನು ವ್ಯಾಖ್ಯಾನಿಸುವುದು ಹೇಗೆ?

ಕನ್ನಡದಲ್ಲಿ ಮೂಲತಃ 'ಹೊತ್ತು' ಎಂದರೆ ಸೂರ್ಯ. 'ತಿಂಗಳು' ಎಂದರೆ ಚಂದ್ರ. ಇಂದು ಅವೆರಡೂ ಕಾಲವನ್ನು ಸೂಚಿಸುವ ಪದಗಳು. ಕಾಲದ ಕಲ್ಪನೆ ನಮಗೆ ನಿಲುಕುವುದೇ ಸೂರ್ಯಚಂದ್ರರ ಮೂಲಕ. ಅವರು ಕಾಲ ನಿರ್ಮಾಪಕರು (**ಯೇ ದ್ವೇ ಕಾಲಂ ವಿಧತ್ತಃ**) ಎನ್ನುತ್ತಾನೆ ಕಾಳಿದಾಸ. ಸೂರ್ಯನ ಉದಯದಿಂದ ಅಸ್ತದವರೆಗೆ ಹಗಲು; ಅಸ್ತದಿಂದ ಉದಯದವರೆಗೆ ರಾತ್ರಿ. ಆ ಇಡಿಯ ದಿನವನ್ನು (ಕಾಲ) **ಪ್ರಹರ, ಯಾಮ, ಘಟಿ, ಮುಹೂರ್ತ, ಕ್ಷಣ, ನಿಮಿಷ** ಮುಂತಾಗಿ ವಿಭಾಗಿಸಿ ಬಿಡಿಬಿಡಿ ಮಾಡಲಾಯಿತು. ಪೂರ್ವಾಹ್ನ–ಅಪರಾಹ್ನ (ಹಗಲ ಮೊದಲ ಅರ್ಧ ಮತ್ತು ಕೊನೆಯರ್ಧ) ವಿಭಾಗ ಇಂದು ಅಷ್ಟಾಗಿ ಬಳಕೆಯಲ್ಲಿಲ್ಲ; ಚಂದ್ರ ಒಂದು ಕಲೆಯೊಡನೆ ತುಸು ಕಾಣಿಸಿಕೊಳ್ಳುವ ರಾತ್ರಿಯಿಂದಾರಂಭಿಸಿ ಪೂರ್ಣವಾಗಿ ಕಾಣಿಸಿಕೊಳ್ಳುವವರೆಗಿನ ಹದಿನೈದು ರಾತ್ರಿಗಳ (ಹಗಲೂ ಸೇರಿ) ಅವಧಿ **ಶುಕ್ಲಪಕ್ಷ**. ಚಂದ್ರ ಒಂದೊಂದೇ ಕಲೆಯನ್ನು ಕಳೆದುಕೊಳ್ಳುತ್ತ ಕಾಣೆಯಾಗುವವರೆಗಿನ ಹದಿನೈದು ದಿನಗಳ ಅವಧಿ **ಕೃಷ್ಣಪಕ್ಷ**. ಎರಡು ಪಕ್ಷಗಳು ಸೇರಿ ಒಂದು **ಮಾಸ** (ತಿಂಗಳು). ಎರಡು ಮಾಸಗಳಿಗೆ ಒಂದು **ಋತು**. ಆರು ಋತುಗಳಿಗೆ ಒಂದು **ಸಂವತ್ಸರ** (ವರ್ಷ). ಲೆಕ್ಕಕ್ಕೆ ಅಂಥದ್ದು ಅರವತ್ತು ಸಂವತ್ಸರ. ಅವು ಮತ್ತೆ ಮತ್ತೆ ಪುನರಾವರ್ತನೆಗೊಳ್ಳುತ್ತವೆ.

ಸೌರಮಾಸದಲ್ಲಿ ಸೂರ್ಯನು ಇಪ್ಪತ್ತೇಳು ನಕ್ಷತ್ರಗಳನ್ನು ದಾಟಿ ಚಲಿಸುವ ಒಂದು ಸುತ್ತು, **ವರ್ಷ**. ಅಶ್ವಿನಿಯಿಂದ ರೇವತಿಯವರೆಗೆ ೨೭ ನಕ್ಷತ್ರಗಳನ್ನು ನಿತ್ಯನಕ್ಷತ್ರ ಮತ್ತು ಮಹಾನಕ್ಷತ್ರಗಳೆಂದು ಲೆಕ್ಕ ಹಾಕಲಾಗಿದೆ. ಮಹಾನಕ್ಷತ್ರಗಳ ಸಮೂಹವನ್ನು ಮೇಷದಿಂದ ಮೀನದವರೆಗೆ **ಹನ್ನೆರಡು ರಾಶಿಗಳಾಗಿ**(ಗುಂಪು) ಗುರುತಿಸಲಾಗಿದೆ. ಸೂರ್ಯನು ಒಂದು ರಾಶಿಯನ್ನು ದಾಟಲು(ಸಂಕ್ರಮಣ) ಸುಮಾರು ಮೂವತ್ತು ದಿನಗಳು ತಗಲುತ್ತವೆ. ಈ ರಾಶಿಯೇ ತಿಂಗಳು. ಮಕರದಿಂದ ಮಿಥುನ ರಾಶಿಯವರೆಗೆ ಆರು ತಿಂಗಳು **ಉತ್ತರಾಯಣ**; ಕರ್ಕದಿಂದ ಧನುರ್ಮಾಸದವರೆಗೆ **ದಕ್ಷಿಣಾಯನ**. ಇದು ಭಾರತೀಯ ಕಾಲಮಾನ ಪದ್ಧತಿ. ಇಲ್ಲಿ ಉಂಟಾಗುವ ಕೊರೆಯನ್ನು ತುಂಬಿಕೊಳ್ಳಲಿಕ್ಕಾಗಿ ಅಧಿಕಮಾಸವನ್ನು ಪರಿಗಣಿಸಲಾಗಿದೆ. ಅಲ್ಲಿಗೆ ವರ್ಷಕ್ಕೆ ೩೬೦ ದಿನಗಳು. ೩೬೫ ದಿನಗಳನ್ನು ಪರಿಗಣಿಸುವ ಪಾಶ್ಚಾತ್ಯ ಕಾಲಮಾನ ಪದ್ಧತಿ ಒಂದರಿಂದ ಮೂವತ್ತು–ಮೂವತ್ತೊಂದು ದಿನಗಳನ್ನು ಲೆಕ್ಕಹಾಕಿ. ಅಧಿಕ ವರ್ಷವನ್ನು (leap year) ಕಲ್ಪಿಸಿ ವರ್ಷವನ್ನು ಸರಿದೂಗಿಸುವುದು. ಕಾಲ ಅಮೂರ್ತ. ಅದು ಮೂರ್ತಗೊಳ್ಳುವುದು ಲೆಕ್ಕದಲ್ಲಿ. ಈ ಲೆಕ್ಕಕ್ಕೆ ಪಕ್ಕ ಬೇಕು (*ಹೋಲಿಕೆ ಮಾಡುವುದಕ್ಕೆ ಇನ್ನೊಂದು ವಸ್ತು ಬೇಕು ಎಂದರ್ಥ–ಸಂ.*). ಪಕ್ಕ ಇಲ್ಲದೆ ಲೆಕ್ಕ ಇಲ್ಲ. ಅಂದರೆ ಕಾಲ ಎನ್ನುವುದು ಸಾಪೇಕ್ಷ (relative). **ಸೂರ್ಯ, ಚಂದ್ರ ಮತ್ತು ನಕ್ಷತ್ರಗಳನ್ನು ಪಕ್ಕದಲ್ಲಿಟ್ಟುಕೊಂಡು ಭೂಮಿಯ ಚಲನೆಯನ್ನು ಲೆಕ್ಕ ಹಾಕಿದಾಗ 'ಕಾಲ'ದ ಪರಿಕಲ್ಪನೆ ಮೈದಾಳುವುದು**. ಭೂಮಿಗೆ ಎರಡು ಬಗೆಯ ಚಲನೆ. ಒಂದು ದಿನದ ಚಲನೆ. ಮತ್ತೊಂದು ವರ್ಷದ ಚಲನೆ. ಅದು ತನ್ನ ತಾನೆ ಸುತ್ತುತ್ತ ಸೂರ್ಯನನ್ನು ಸುತ್ತುತ್ತದಲ್ಲ, ಅದಕ್ಕೆ.

## ಕಾಲವು ಸಾಪೇಕ್ಷ

ಒಂದರ್ಥದಲ್ಲಿ ಚಲನೆಯೂ ಸಾಪೇಕ್ಷವೇ. ಪಕ್ಕದ ವಸ್ತುಗಳು ಬದಲಾಗುತ್ತಿರುವುದು ನಮ್ಮ ಅನುಭವಕ್ಕೆ ಬಂದಾಗಲೇ ನಾವು ಚಲಿಸುತ್ತಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ಭೂಮಿಯ ವೈಶಾಲ್ಯದಿಂದಾಗಿ ಭೂಮಿ ಚಲಿಸುತ್ತಿದ್ದರೂ ನಮ್ಮ ಸುತ್ತಮುತ್ತಣ ವಸ್ತು ಬದಲಾಗುವುದಿಲ್ಲ. ಅದಕ್ಕಾಗಿ ಭೂಮಿಯ ಚಲನೆ ನಮ್ಮ ಅನುಭವಕ್ಕೆ ಬರಲಾರದು. ದೂರದ ಸೂರ್ಯನ ಸ್ಥಿತಿ ಬದಲಾಗುತ್ತಿರುವುದರಿಂದ, ಸೂರ್ಯನೆ ತಿರುಗುತ್ತಿರುವನೆಂದು ಅನಿಸುತ್ತದೆ. ವೇಗವಾಗಿ ಚಲಿಸುತ್ತಿರುವ ರೈಲಿನ ಪಕ್ಕದಲ್ಲಿ ನಿಂತಿರುವ ರೈಲು ಚಲಿಸುತ್ತಿರುವಂತೆಯೂ, ಪಕ್ಕದಲ್ಲಿ ವೇಗವಾಗಿ ರೈಲು ಸಾಗುತ್ತಿದ್ದರೆ ನಾವು ಕುಳಿತ, ನಿಂತ ರೈಲು ಚಲಿಸುತ್ತಿರುವಂತೆಯೂ ಅನಿಸುತ್ತದೆ. ಹಾಗೆಯೇ ಭೂಮಿ ನಿಂತೇ ಇದೆ; ಸೂರ್ಯ ಸುತ್ತುತ್ತಿದ್ದಾನೆ ಎನ್ನುವ ಭ್ರಮೆಯನ್ನು ಮೀರಿ ಕಾಲ ಕರಾರುವಾಕ್ಕಾದದ್ದು ಸಾಪೇಕ್ಷತೆಯಿಂದಲೇ. ಕಾಲ ಸಾಪೇಕ್ಷವಾದ್ದರಿಂದಲೇ, ದೇಶ (space) ಭಿನ್ನವಾದಂತೆ ಕಾಲವೂ ಭಿನ್ನವಾಗುವುದು.

ಇದಕ್ಕೆ ನಿದರ್ಶನಗಳನ್ನು ಕೊಡಬಹುದು. ಸ್ಕಾಂಡಿನೇವಿಯಾದ ಕೆಲವು ಭಾಗಗಳಲ್ಲಿ ಬೇಸಿಗೆಯಲ್ಲಿ ದಿನಕ್ಕೆ ೩–೪ ಗಂಟೆಗಳಷ್ಟು ಹಗಲು; ಚಳಿಗಾಲದಲ್ಲಿ ತದ್ವಿರುದ್ಧ. ನಾರ್ವೆಯ ಉತ್ತರ ಭಾಗಗಳಲ್ಲಿ ವರ್ಷಕ್ಕೆ ಆರು ತಿಂಗಳು ಹಗಲು; ಇನ್ನಾರು ತಿಂಗಳು ರಾತ್ರಿ. ಅಂದಮೇಲೆ ಸೂರ್ಯ ಮೂಡುವುದೂ ಇಲ್ಲ; ಮುಳುಗುವುದೂ ಇಲ್ಲ. ಮೂಡುತ್ತಿರುವವರೂ ಮತ್ತು ಮುಳುಗುತ್ತಿರುವವರೂ ನಿರಂತರವಾಗಿ ಚಲಿಸುತ್ತಿರುವ ಈ ಭೂಮಿಯನ್ನಾಶ್ರಯಿಸಿರುವ ನಾವು. '**ಕಾಲೋ ನ ಯಾತಃ ವಯಮೇವ ಯಾತಾಃ**'– ಕಾಲ ಚಲಿಸುತ್ತಿಲ್ಲ, ಚಲಿಸುತ್ತಿರುವವರು ನಾವು ನಾವೇ. ಈ ಮೂಡು–ಮುಳುಗುಗಳ ಚೌಕಟ್ಟಿನಲ್ಲಿ ಗಡಿಯಾರ ಎನ್ನುವುದು ನಾವು ಮಾಡಿಕೊಂಡ ಲೆಕ್ಕಾಚಾರ. ಹೀಗಾಗಿ ನಾವು ನಿಂತ ನೆಲದ ಈ ಕಾಲ, ಇತರರು ನಿಂತ ನೆಲದ ಆ ಕಾಲವಲ್ಲ. ಅವರವರಿಗೆ ಅವರವರ ಕಾಲ.

## ಕಾಲದ ತಾತ್ವಿಕ ಪರಿಕಲ್ಪನೆಗಳು

ಇಷ್ಟಾಗಿಯೂ ಕಾಲದ ಮೂಲ ಸ್ವರೂಪವೇನು ಎನ್ನುವುದು ಸ್ಪಷ್ಟವಾಗುವುದಿಲ್ಲ. ಈ ಜಗತ್ತಿನಲ್ಲಿ ಎರಡು ಸಂಗತಿಗಳಿವೆ. ಒಂದು 'ಇರುವಿಕೆ'(ಸತ್ತೆ), ಇನ್ನೊಂದು 'ಆಗುವಿಕೆ'(ಸಂಭವ). ಕಿಡಿ ಇದೆ, ಅದು ಜ್ವಾಲೆ ಆಗುತ್ತದೆ. ನೀರು ಇದೆ, ಅದು ಆವಿ ಆಗುತ್ತದೆ. ಬೀಜ ಇದೆ, ಅದು ಗಿಡ ಆಗುತ್ತದೆ. ಮಗು ಇದೆ, ಅದು ವೃದ್ಧನಾಗುತ್ತದೆ. ಒಟ್ಟಿನಲ್ಲಿ ಈ ಆಗುವಿಕೆಯು ಇರುವಿಕೆಯ ಪರಿಣಾಮ, ವಸ್ತುವಿನಲ್ಲಿ ಅಂತರ್ಹಿತವಾದ ಗುಣಗಳ ಪರಿಣಾಮ, ಪ್ರಕ್ರಿಯೆಯ ಅಂದರೆ, ವಿಕಾಸಗೊಳ್ಳುವ ಅಂತರವೆ ಕಾಲ. ಅಂದರೆ ಕ್ಷಣ, ದಿನ, ಮಾಸ ಮುಂತಾಗಿ ಸಾಗಿದಂತೆ ವಸ್ತುವಿನಲ್ಲಿ ಅಂತರ್ಗತವಾದ ಗುಣಶಕ್ತಿಗಳು ಪರಿಣಾಮಗೊಂಡಂತೆ ನಮಗೆ ಭಾಸವಾಗುತ್ತದೆ. ಇದು ಸ್ಥೂಲಕಾಲ. ಕ್ಷಣಕ್ಕೂ ಸೂಕ್ಷ್ಮವಾದ ಕಾಲ ನಮ್ಮ ಅರಿವಿಗೆ ಬರದು. ಈ ಪರಿಣಾಮ ಪ್ರಕ್ರಿಯೆಯ ಕಾಲ ನಿರಂತರ. ಅತ್ಯಂತ ಸೂಕ್ಷ್ಮ, ಅಣುರೂಪಿ. (**ಸುಮಕೆ ಸೌರಭ ಬಂದ ಘಳಿಗೆ ಯಾವುದು ಹೇಳು?**– ಕವಿ ರಾಮಚಂದ್ರ ಶರ್ಮ) ಬೀಜ ಮೊಳೆಯುವ, ಹಾಲು ಮೊಸರಾಗುವ ಕ್ಷಣವನ್ನೂ ದಾಖಲಿಸಲಾಗದು. ನಮ್ಮ ಅರಿವಿಗೆ ಆ ಸೂಕ್ಷ್ಮ ಕಾಲವನ್ನು ಗ್ರಹಿಸುವ ಶಕ್ತಿ ಇಲ್ಲ (ಅಂತೆಯೇ ಮಹಾಕಾಲವನ್ನು ಗ್ರಹಿಸುವ ಶಕ್ತಿಯೂ ಇಲ್ಲ). ಹಾಗಾಗಿ ಕಾಲ ನಿರಂತರ ಅಧ್ಯಯನಕ್ಕೆ – ಶೋಧಕ್ಕೆ ಒಳಗಾಗಿದೆ. ನಮ್ಮ ಪ್ರಾಚೀನ ದಾರ್ಶನಿಕರು, ವೈದ್ಯಶಾಸ್ತ್ರಜ್ಞರು, ವಿಜ್ಞಾನಿಗಳು ಕಾಲಕ್ಕೆ ಮುಖಾಮುಖಿಯಾಗಿದ್ದಾರೆ.

ನಿದರ್ಶನಕ್ಕಾಗಿ ಕೆಲವನ್ನು ಇಲ್ಲಿ ನೀಡಬಹುದಾಗಿದೆ. ಖ್ಯಾತ ವೈಯಾಕರಣನಾದ ಭರ್ತೃಹರಿಯ ಪ್ರಕಾರ ವಸ್ತುಗಳ ಉತ್ಪತ್ತಿ, ಸ್ಥಿತಿ, ಲಯಗಳಿಗೆ ನಿಮಿತ್ತವಾದದ್ದು ಕಾಲ. ಕಾಲವು ಅಖಂಡವಾದರೂ ಉಪಾಧಿ ಭೇದದಿಂದ ನಾನಾ ರೂಪಗಳನ್ನು ತಾಳಿ ವ್ಯವಹಾರದಲ್ಲಿ ಗೋಚರಿಸುತ್ತದೆ. ಮುಖ್ಯವಾಗಿ ಈ ಸೃಷ್ಟಿಗೆ ಮೂಲ ಕಾರಣವಾದ ಶಬ್ದದೊಂದಿಗೆ ಅಂದರೆ, ಕ್ರಿಯೆಯಲ್ಲಿ ಅದು ಅಭಿವ್ಯಕ್ತವಾಗುತ್ತದೆ. ಭೂತ–ವರ್ತಮಾನ–ಭವಿಷ್ಯತ್ ರೂಪದಲ್ಲಿ ಅದು ವ್ಯವಹಾರದಲ್ಲಿದೆ. ಕಾಲವು ಶಬ್ದಬ್ರಹ್ಮದ ಶಕ್ತಿ. ಆತ್ಮವನ್ನು ಒಪ್ಪದ ಬೌದ್ಧರು ಕಾಲವನ್ನೂ ಒಪ್ಪುವುದಿಲ್ಲ. ಭೂತ–ವರ್ತಮಾನ–ಭವಿಷ್ಯತ್ ಕಾಲಗಳು ಸಾಪೇಕ್ಷ ಕಲ್ಪನೆಗಳಷ್ಟೆ ಆಗಿದ್ದು ಸ್ವತಂತ್ರ ಕಾಲ ಎನ್ನುವುದು ಇಲ್ಲ. ಲೋಕವು ಸಂಬಂಧಗಳಿಂದ ಸೃಷ್ಟಿಯಾದದ್ದು ಮತ್ತು ನಿರಂತರ ಪ್ರವಾಹರೂಪಿಯಾದದ್ದು. ಪ್ರತಿ ಹಂತವೂ ಅದಕ್ಕೆ ಸಂಬಂಧಿಸಿದ ಹಾಗೆ ಹಿಂದನ್ನು ಮುಂದನ್ನು ಪಡೆದಿದೆ. ಆ ಹಂತವೂ ಸೇರಿದಂತೆ ಅದರ ಹಿಂದು ಅಥವಾ ಮುಂದು ಶಾಶ್ವತ ಅಲ್ಲ. ಅಥೆನ್ಸ್‌ನ ಹೆರಾಕ್ಲಿಟಸ್‌ನದು ಕೂಡ ಇದೇ ಪ್ರಕ್ರಿಯಾಸಿದ್ಧಾಂತ. ಯಾವುದೂ ಸ್ಥಿರ(ಇರು) ಅಲ್ಲ. ಎಲ್ಲವೂ 'ಆಗು' ವಿಕೆಯಲ್ಲಿರುತ್ತದೆ. ಚಲನೆ ಮತ್ತು ಬದಲಾವಣೆಯೇ 'ಆಗು'ವಿಕೆ. ಅದೇ ವಿಶ್ವದ ನಿಯತಿ. ಈ ಪ್ರಪಂಚ ನಿರಂತರ ಪ್ರವಾಹ. ಒಂದೇ ನದಿಗೆ ಎರಡು ಸಲ ಕಾಲಿಡಲು ಸಾಧ್ಯವಿಲ್ಲ.

ಇಪ್ಪತ್ನಾಲ್ಕು ತತ್ತ್ವಗಳಿಂದಾದದ್ದು ಈ ಪ್ರಪಂಚ ಎನ್ನುವ ಸಾಂಖ್ಯರು ಕಾಲವನ್ನು ಒಂದು ತತ್ತ್ವವೆಂದು ಪರಿಗಣಿಸುವುದಿಲ್ಲ. ಸತ್ವರಜಸ್ತಮೋ–ಗುಣಾತ್ಮಕವಾದ ಪ್ರಕೃತಿಯ ಪರಿಣಾಮದಿಂದಾಗಿ ಕಾಲ ಅಸ್ತಿತ್ವದಲ್ಲಿದೆ. ಆ ಅರ್ಥದಲ್ಲಿ ಪ್ರಕೃತಿಯೇ ಕಾಲ. ಪಂಚಭೂತಗಳ ಪರಮಾಣುವಿಗಿಂತ ಸೂಕ್ಷ್ಮಸ್ಥಿತಿಗೆ 'ತನ್ಮಾತ್ರ' ವೆಂದು ಹೆಸರು. ತನ್ಮಾತ್ರವು ದೇಶ (space) ಕಾಲ (time) ನಿಮಿತ್ತ (causation)ಗಳೊಂದಿಗೆ ಸದಾ ಸಂಬಂಧ ಹೊಂದಿರುತ್ತದೆ. **ತನ್ಮಾತ್ರದ ಚಲನೆಯ ಅವಧಿಯೇ ಕಾಲ.** ಅತ್ಯಂತ ಸೂಕ್ಷ್ಮವಾದ ತನ್ಮಾತ್ರದ ಚಲನೆಯೂ ಅತ್ಯಂತ ಸೂಕ್ಷ್ಮ. ಅದನ್ನು **ಕ್ಷಣ** (ರೂಢಿಯಲ್ಲಿರುವ ಅರ್ಥದಲ್ಲಲ್ಲ) ಮತ್ತು **ಕ್ರಮ** ಎಂದು ಕರೆದಿದೆ. ವಸ್ತುವನ್ನು ವಿಭಜಿಸಿದಾಗ ಪರಮಾಣು ದೊರೆಯುವಂತೆ, ಅದಕ್ಕಿಂತಲೂ ಹೆಚ್ಚಾಗಿ ವಿಭಾಗಿಸಿದಾಗ ದೊರಕುವ ಆ ಕಾಲವು **ಕ್ಷಣ**. ಕ್ಷಣಗಳು ಸೇರಿ ಆದ, ಪರಮಾಣುಗಳು ಚಲಿಸುವ ಕಾಲವು **ಕ್ರಮ**. ಈ ಕ್ರಮವನ್ನು ಸೂರ್ಯಗತಿಯ ಉಪಾಧಿಯಿಂದ ಹಗಲು ರಾತ್ರಿ ಘಂಟೆ ನಿಮಿಷ ಮುಂತಾಗಿ ವಿಭಜಿಸಲಾಗಿದೆ. ಈ ವಿಭಜನೆಯು ವ್ಯವಹಾರಕ್ಕಾಗಿ ಬುದ್ಧಿಕಲ್ಪಿತವಾದದ್ದು. ಯೋಗದರ್ಶನದ ಪತಂಜಲಿ ಮುನಿಯ ಅಭಿಪ್ರಾಯವೂ ಇದೇ ಆಗಿದೆ.

ಕಾಲವನ್ನು **ದ್ರವ್ಯ** ಎನ್ನುವವರಿದ್ದಾರೆ. ಗೌತಮ–ಕಣಾದರ ನ್ಯಾಯ–ವೈಶೇಷಿಕ ದರ್ಶನದ ಪ್ರಕಾರ ಕಾಲವು ದ್ರವ್ಯ. ಆದರೂ ಇಂದ್ರಿಯ ಗೋಚರವಲ್ಲ. ಕಾಲವು **ವಿಭು (ಸರ್ವವ್ಯಾಪಿ) ಮತ್ತು ನಿತ್ಯ.** ವಿಭುವಾದರೂ ಉಪಾಧಿವಶದಿಂದಾಗಿ ಕ್ಷಣ ಮುಹೂರ್ತ ಮುಂತಾದ ಭೇದಗಳೊಡನೆ ವ್ಯವಹಾರಕ್ಕೆ ದಕ್ಕುವ ಕಾಲ, ಸರ್ವವಸ್ತುಗಳಿಗೂ ಕಾರಣ ಮತ್ತು ಸರ್ವಕ್ಕೂ ಆಧಾರ. ಮೀಮಾಂಸಾ ದರ್ಶನದಲ್ಲೂ ಕಾಲವು ದ್ರವ್ಯ, ವಿಭು ಮತ್ತು ನಿತ್ಯ. ಅದು ಒಂದೇ ಆದರೂ ಉಪಾಧಿ ಭೇದದಿಂದಾಗಿ ಕ್ಷಣ, ಮಾಸ, ವರ್ಷವೆಂದು ಭೇದವ್ಯವಹಾರಕ್ಕೆ ಒಳಗಾಗುವುದು. ಕಾಲವು ಇಂದ್ರಿಯಗೋಚರವೆಂದು ಹೇಳುವುದು ಮೀಮಾಂಸಾಕಾರರಲ್ಲೊಬ್ಬನಾದ ಕುಮಾರಿಲ ಭಟ್ಟನ ವಿಶೇಷತೆ. ಕಾಲವು ಇಂದ್ರಿಯಗಳಿಗೆ ನೇರವಾಗಿ ಗೋಚರವಲ್ಲದಿದ್ದರೂ, ಇಂದ್ರಿಯಗೋಚರವಾದ ವಿಷಯಗಳಿಗೆ ಕಾಲವು ವಿಶೇಷಣವಾಗಿರುವುದರಿಂದ ಇಂದ್ರಿಯಗಳು ವಿಷಯದೊಂದಿಗೇ ಕಾಲವನ್ನೂ ಗ್ರಹಿಸುತ್ತವೆ (*ಪುಸ್ತಕವು ಇಂದ್ರಿಯ ಗ್ರಾಹ್ಯ ವಿಷಯ. ಅದು ಎಷ್ಟು ವರ್ಷ ಹಿಂದಿನದು ಎಂಬ ಕಾಲಗಣನೆಯು ಅದಕ್ಕೆ ವಿಶೇಷಣ. ಹಾಗೆಂದೇ ಇಷ್ಟು ವರ್ಷದ ಹಿಂದಿನ ಪುಸ್ತಕ* ಎನ್ನುತ್ತೇವೆ–ಸಂ.). ಅವನ ಶಿಷ್ಯನಾದ ಪ್ರಭಾಕರನು ಈ ಅಭಿಪ್ರಾಯವನ್ನು ಒಪ್ಪುವುದಿಲ್ಲ. ಜೈನರೂ ಕಾಲವನ್ನು ದ್ರವ್ಯವೆಂದೇ ಪರಿಗಣಿಸುವರು. **ನಿಶ್ಚಯ** ಮತ್ತು **ವ್ಯವಹಾರವೆಂದು** ಕಾಲ ಎರಡು ವಿಧ. ವಿಭಜಿಸಲಾಗದ ಕಾಲ ನಿಶ್ಚಯ ಕಾಲ. ಅದು ಅಣುರೂಪಿ. ಆದ್ದರಿಂದಲೇ ಇಂದ್ರಿಯ ಗೋಚರವಲ್ಲ. ಕ್ಷಣ, ಮುಹೂರ್ತ ಮುಂತಾಗಿ ವಿಭಜಿಸಲಾಗುವ ಕಾಲವೆ ವ್ಯವಹಾರ ಕಾಲ. ಇದು ಇತರ ದ್ರವ್ಯಗಳೊಡನೆ ಇಂದ್ರಿಯ ಗೋಚರವಾಗುವುದು. ಇದಕ್ಕೆ 'ಸಮಯ' ಎಂದು ಹೆಸರು.

ದ್ವೈತವೇದಾಂತದ ಶ್ರೀಮಧ್ವಾಚಾರ್ಯರ ಅಭಿಪ್ರಾಯದಲ್ಲಿ ಕಾಲವು ದ್ರವ್ಯವಾದರೂ ಅಖಂಡವಲ್ಲ. ಕ್ಷಣ, ಮುಹೂರ್ತ ಮುಂತಾಗಿ ಬಹುರೂಪಿ. ಸರ್ವವ್ಯಾಪಿಯಾದ ಕಾಲಕ್ಕೆ ಉತ್ಪತ್ತಿ ವಿನಾಶಗಳಿರುವುದರಿಂದ ಅದು ಅನಿತ್ಯ. ಕಾಲವು ಪ್ರಾಕೃತಿಕವಾದುದು.

ಅದ್ವೈತ ವೇದಾಂತದ ಶ್ರೀಶಂಕರಾಚಾರ್ಯರು ಕಾಲವು ಅವಿದ್ಯೆ ಅಥವಾ ಮಾಯೆ ಎಂದೇ ಹೇಳುತ್ತಾರೆ. ಅದು ಸರ್ವಾಧಾರವೂ ಅಲ್ಲ, ನಿತ್ಯವೂ ಅಲ್ಲ. ವ್ಯವಹಾರ ಸಿದ್ಧಿಗಾಗಿ ಕಾಲ ಕಲ್ಪಿತವಾಗಿದೆ. ಕಾಲವು ಕೇವಲ ವ್ಯಾವಹಾರಿಕ. ವ್ಯವಹಾರದಲ್ಲಿ ಗೋಚರಿಸುವ ಕಾಲವು ಬ್ರಹ್ಮದ ಮಾಯಾಶಕ್ತಿ. ಕಾಲವು ವ್ಯಾವಹಾರಿಕವಾಗಿ ಸತ್ಯ. ಪಾರಮಾರ್ಥಿಕ ಸತ್ತೆ ಅದಕ್ಕಿಲ್ಲ. ಉಪಾಧಿಭೇದದಿಂದಾಗಿ ಕ್ಷಣ, ಮುಹೂರ್ತ ಮುಂತಾಗಿ ವ್ಯವಹಾರ ಸಂಭವಿಸುವುದು. ಬ್ರಹ್ಮಜ್ಞಾನ ಸಾಕ್ಷಾತ್ಕಾರ ಪರ್ಯಂತ ಮಾತ್ರ ಈ ಪ್ರಪಂಚ ಹೇಗೆ ಸಾರ್ಥಕವೋ ಹಾಗೆ ಕಾಲವೂ ಕೂಡ, ಈ ವ್ಯವಹಾರ ಪ್ರಪಂಚದಲ್ಲಿ ಅರ್ಥಪೂರ್ಣವಾದುದು.

## ಪಾಶ್ಚಾತ್ಯ ಚಿಂತನೆಯಲ್ಲಿ ಕಾಲದ ಪರಿಕಲ್ಪನೆ

ಪಾಶ್ಚಾತ್ಯರಲ್ಲಿ ವಿಜ್ಞಾನವು ಶೈಶವಾವಸ್ಥೆಯಲ್ಲಿದ್ದಾಗಲೇ ಅರಿಸ್ಟಾಟಲ್ ಕಾಲವನ್ನು ಕುರಿತು ಚಿಂತಿಸಿದನು. ಕಾಲವು ಚಲನೆಯ ಗುಣ. ಚಲನೆಯ

ಪ್ರಮಾಣ ಅಳೆಯುವ ಸಾಧನ. ಚಲನೆಯ ಪ್ರಮಾಣವನ್ನು ಅಳೆಯಲು ಸಂಖ್ಯೆಯನ್ನು ಬಳಸಲಾಗುವುದು. ಚಲನೆಗೆ ಕಾಲವು ಉಪಾಧಿಯಾದ್ದರಿಂದ ಸಂಖ್ಯೆಗೂ ಕಾಲವು ಉಪಾಧಿ. ಆದರೆ ಕಾಲವು ಅಳೆಯುವ ಸಂಖ್ಯೆ ಅಲ್ಲ; ಅಳೆಯಲ್ಪಡುವ ವಸ್ತುಗಳ ಸಂಖ್ಯೆ. ಇದು ಅರಿಸ್ಟಾಟಲ್‌ನ ಕಾಲಮೀಮಾಂಸೆ. ಕಾಲವು ಸಂಖ್ಯೆ ಅಲ್ಲ. ಅದು ಸಂಖ್ಯೆಯಿಂದ ಗುರುತಿಸಲಾದ ಸ್ವಯಂವೇದ್ಯ – ಎಂದು ಇದಕ್ಕೆ ವಿರುದ್ಧ ಅಭಿಪ್ರಾಯ ನೀಡುವ ಪ್ಲಾಟಿನಸ್. ಕಾಲವು ಸ್ವಯಂಪರಿಪೂರ್ಣ ಎನ್ನುತ್ತಾನೆ. ಅಗ್ರಾಹ್ಯವಾದ ಅನಾದಿ ಅನಂತ ಕಾಲದ ಬಿಂಬವಾಗಿದ್ದು, ಚಲಿಸುತ್ತಿರುವುದೇ ನಾವು ಗ್ರಹಿಸುವ ಕಾಲ ಎಂದು ಪ್ಲೇಟೋ ಹೇಳಿದುದನ್ನು ಅನುಮೋದಿಸುತ್ತಾನೆ. ಮುಂದುವರಿದು ಆತ್ಮದ ಸೃಷ್ಟಿಸುವ ಕಾರ್ಯವೂ ಕಾಲವೂ ಒಂದೇ ಎನ್ನುತ್ತಾನೆ. ಸೃಷ್ಟಿಯೇ ಕಾಲ; ಅದರಲ್ಲಿ ಬ್ರಹ್ಮಾಂಡ ಅಡಗಿದೆ ಎನ್ನುವುದು ಅವನ ಅಭಿಪ್ರಾಯ. ಮನಸ್ಸಿನ ಒಂದು ಬಗೆಯ ವಿಸ್ತರಿಸುವಿಕೆಯೇ ಕಾಲ ಎಂದು ಆಗಸ್ಟಿನ್ ಹೇಳುತ್ತಾನೆ. ಮೆಕ್‌ಟಗ್ಗಾರ್ಟ್ ಕಾಲವನ್ನು ವೈಚಾರಿಕ ನೆಲೆಯಿಂದ ಅಲ್ಲಗಳೆಯುತ್ತಾನೆ. ಕಾಲ ಮತ್ತು ದೇಶಗಳು ಮೂಲ ಕಾರಣಗಳು (a priori). ಮನಸ್ಸು ಇಂದ್ರಿಯಗ್ರಾಹ್ಯ ಅನುಭವವನ್ನು ಆ ಎರಡು ಬಗೆಯಲ್ಲಿ ವಿಶ್ಲೇಷಿಸಿ ಯೋಚನೆಯನ್ನು ರೂಪಿಸುವುದು. ಅಂದರೆ ಕಾಲ ಮತ್ತು ದೇಶಗಳು ಮೂಲ ಕಾರಣಗಳಾದರೂ ಮನಸ್ಸಿನಿಂದಾಗಿ ಅಸ್ತಿತ್ವಕ್ಕೆ ಬರುತ್ತವೆ. ಆದ್ದರಿಂದ ಕಾಲ–ದೇಶಗಳು ಅಸ್ತಿತ್ವಕ್ಕೆ ಬರುವ ಮೊದಲು ಏನಾಗಿದ್ದವು ಎಂದು ಕೇಳುವುದು ಜಾಣತನವಲ್ಲ ಎನ್ನುತ್ತಾನೆ ಸುಪ್ರಸಿದ್ಧ ತತ್ವಜ್ಞಾನಿ ಕ್ಯಾಂಟ್. ಆದರೆ ಮನುಷ್ಯನು ಪರಿಸರಕ್ಕೆ ತೆಪ್ಪಗೆ ಒಪ್ಪಿಸಿಕೊಳ್ಳುವ ಯಂತ್ರ ಮಾತ್ರವಲ್ಲ; ಪ್ರಗತಿಯಲ್ಲಿ ಸ್ವಮಾರ್ಗವನ್ನು ಹೊಸದಾಗಿ ರೂಪಬಲ್ಲ, ಕಾಲಗತಿಯನ್ನು ಬದಲಾಯಿಸಬಲ್ಲ ಶಕ್ತಿಕೇಂದ್ರ ಎನ್ನುವ ಬರ್ಗಸನ್, ಕಾಲವು ಬದುಕಿನ ಹಾಗೂ ಎಲ್ಲ ವಾಸ್ತವಗಳ ಸಾರಭೂತ ಎನ್ನುತ್ತಾನೆ – ಕೃಷ್ಣನು **ಕಾಲೋಽಸ್ಮಿ** ಎಂದಂತೆ. ದೇಶ ಮತ್ತು ಕಾಲಗಳಿಗೆ ಪ್ರತ್ಯೇಕ ಅಸ್ತಿತ್ವವಿಲ್ಲ, ಅವು ಹಾಸುಹೊಕ್ಕಾಗಿರುವುದೇ ಈ ವಿಶ್ವದ ಆಧಾರ ಎಂದು ಐನ್‌ಸ್ಟೈನ್ ಮತ್ತವನ ಪರಂಪರೆ ವಿಶ್ಲೇಷಿಸಿದೆ. ಆದರೆ ಭೌತಶಾಸ್ತ್ರದ ಎಣಿಕೆಯ ಕಾಲ ಮತ್ತು ಪ್ರಕೃತಿಯು ಮುನ್ನಡೆಯುವ ಕಾಲಾವಧಿ ಬೇರೆ ಬೇರೆ ತೆರನಾಗಿವೆ. ಭೌತಶಾಸ್ತ್ರದ ಕಾಲವನ್ನು ಕಲ್ಪಿಸಿಕೊಳ್ಳಲಷ್ಟೇ ಸಾಧ್ಯ, ಪ್ರಕೃತಿಯ ಕಾಲಾವಧಿಯನ್ನು ಅನುಭವಿಸಲು ಸಾಧ್ಯ ಎನ್ನುತ್ತಾನೆ ಭೌತ ಮತ್ತು ಗಣಿತಶಾಸ್ತ್ರಜ್ಞ ಆಲ್‌ಫ್ರೆಡ್ ನಾರ್ತ್ ವೈಟ್‌ಹೆಡ್. ದೇಶ–ಕಾಲ–ಚಲನೆಗಳ ವಿಷಯದಲ್ಲಿ ಕ್ರಾಂತಿಕಾರಿಯಾದ ಶೋಧವನ್ನು ಮಾಡಿ ಸಾಪೇಕ್ಷ ಸಿದ್ಧಾಂತವನ್ನು ಮಂಡಿಸಿದ ಐನ್‌ಸ್ಟೈನ್ ಮತ್ತು ಅತಿಶುದ್ಧ ಸತ್ಯ ಗಣಿತದ ಕಾಲವನ್ನು ವಿಶ್ಲೇಷಿಸಿದ ನ್ಯೂಟನ್ – ಇಬ್ಬರೂ ಈ ದಿಸೆಯಲ್ಲಿ ನೀಡಿದ ಬೆಳಕು, ಅನುಭಾವದಷ್ಟೇ ಎತ್ತರದ್ದು.

### ವೇದ–ಪುರಾಣಗಳಲ್ಲಿ ಕಾಲದ ಪರಿಕಲ್ಪನೆ

ವೇದ ಮತ್ತು ಪುರಾಣಗಳಲ್ಲಿ ಕಾಲವನ್ನು ಕಾವ್ಯಾತ್ಮಕವಾಗಿ ಅಂದರೆ ರೂಪಕಾತ್ಮಕವಾಗಿ ಚಿತ್ರಿಸುವುದನ್ನು ಕಾಣುತ್ತೇವೆ. ಅವು ಉಪಾಸನಾ ಮಾರ್ಗದ ಆಗಮ ತಂತ್ರಗಳಿಗೆ, ಸಗುಣೋಪಾಸನೆಗೆ ಪೂರಕವಾಗಿವೆ. "ಕಾಲವೆಂಬ ಅಶ್ವ (ನಿಂತಲ್ಲಿ ನಿಲ್ಲದ್ದು) ಸಂಚರಿಸುತ್ತದೆ. ದ್ರಷ್ಟಾರರಾದ ಕವಿಗಳು ಆ ಕಾಲಾಶ್ವವನ್ನೇರಿ ಚಕ್ರಾಕಾರದ ಭೂಮಂಡಲವನ್ನು ಸಂಚರಿಸುವರು. ಕಾಲಕ್ಕೆ ಏಳು ಚಕ್ರಗಳು, ಕಾಲದ ಮೇಲೆ ಪೂರ್ಣ ಕುಂಭವನ್ನು ಇಡಲಾಗಿದೆ. ಚಕ್ರಗಳು ಬಹು ರೂಪಗಳಲ್ಲಿ ಕಾಣುತ್ತವೆ. ಕಾಲ ತಂದೆಯೂ ಆಗಿದೆ; ಮಗನೂ ಆಗಿದೆ. ಕಾಲಕ್ಕಿಂತ ತೇಜಸ್ವಿಯಾದದ್ದು ಇನ್ನೊಂದಿಲ್ಲ. ಕಾಲದಲ್ಲಿ ವಿಶ್ವದ ಸಮಸ್ತವೂ ಇದೆ. ಕಣ್ಣುಗಳು ಕಾಲದಲ್ಲಿ ಹೊರ ನೋಡುತ್ತವೆ. ಸಕಲ ಲೋಕಗಳನ್ನೂ ಬ್ರಹ್ಮದ ಮೂಲಕ ಸ್ವಾಧೀನ ಪಡಿಸಿಕೊಂಡ ಅತ್ಯುನ್ನತ ದೇವನಾದ ಕಾಲವು ಮುನ್ನುಗ್ಗುತ್ತದೆ" – ಕಾಲವು ನದಿಯಂತೆ ಒರತೆಯಿಂದ ಜಿನುಗಿ ಮಹಾಪ್ರವಾಹವಾಗಿ ನಿರಂತರ ಪ್ರವಹಿಸುವುದು (*ತೈತ್ತಿರೀಯ ಅರುಣಾಧ್ಯಾಯ*). ಇವು ವೇದಗಳಲ್ಲಿ ದೊರೆಯುವ ಕೆಲವು ಚಿತ್ರಗಳು.

ಪುರಾಣವು ನೇರವಾಗಿ ಕಾಲ ಭಗವದಂಶವೆಂದು ಸಾರುತ್ತದೆ (**ಕಾಲೋಽಂಶಃ ಪರಮಾತ್ಮನಃ–ಮಹಾಭಾರತ**). '**ಲೆಕ್ಕದಲ್ಲಿ ಕಾಲ ನಾನು**' (**ಕಾಲಃ ಕಲಯತಾಮಹಮ್**–ಭಗವದ್ಗೀತೆ). ಲೆಕ್ಕವೆಂದರೆ ಕೂಡುವುದು; ಕಳೆಯುವುದು. ಜೀವಿಗಳನ್ನು ಒಟ್ಟಿಗೆ ತಂದು ಕೂಡಿಸುವುದು; ಕಳೆಯುವುದು ಕಾಲದ ಶಕ್ತಿ (**ಕಾಲಃ ಕಲಯತಿ ಪ್ರಜಾಃ –ಮಹಾಭಾರತ**). **ಕಲನಾತ್ ಕಾಲಃ** ಎನ್ನುವುದು ಕಾಲ ಶಬ್ದದ ನಿಷ್ಪತ್ತಿ. ಕಲನವೆಂದರೆ ಸಂಕಲನ(ಕೂಡು) ಮತ್ತು ವ್ಯವಕಲನ (ಕಳೆ). ಕಾಲಕ್ಕೆ ಎಲ್ಲವನ್ನೂ ಬೇಯಿಸಿ ಮಾಗಿಸುವ ಶಕ್ತಿ ಇದೆ. ಕಾಲ ತಾನೇ ತನ್ನಲ್ಲಿ ಎಲ್ಲವನ್ನೂ ಮಾಗಿಸುತ್ತದೆ. (**ಕಾಲಃ ಪಚತಿ ಭೂತಾನಿ...**) ಆದರೆ ಈ ಕಾಲ ಯಾರಲ್ಲಿ ಮಾಗುವುದೋ ಅದನ್ನು (ಅವನನ್ನು) ಯಾರೂ ತಿಳಿದಿಲ್ಲ ಎನ್ನುತ್ತದೆ ಮಹಾಭಾರತ. 'ಜೀವಿಗಳಿಗೆ ಜಗತ್‌ಸಂಗವನ್ನುಂಟುಮಾಡಿ, ಬೆಳೆಸಿ, ನಾಶ ಮಾಡುವ ಕಾಲ ನಾನೇ' (**ಶ್ರೀಕೃಷ್ಣ –ಭಗವದ್ಗೀತೆ**). ಕಾಲವೆಂಬುದು ಚೆಂಡಿನಾಟ. ಹಗಲು–ರಾತ್ರಿ, ಮೈಗು–ಬೆಳಗು, ವಸಂತ–ಶಿಶಿರ ಮತ್ತೆ ಮತ್ತೆ ಅತ್ತಿಂದಿತ್ತ ಚಲಿಸುತ್ತವೆ. ಕಾಲ ಆಟವಾಡುತ್ತದೆ; ಆಯುಷ್ಯ ಕಳೆದು ಹೋಗುತ್ತದೆ (ಶ್ರೀಶಂಕರಾಚಾರ್ಯರು). 'ಈ ಕಾಲವನ್ನೂ (ವ್ಯಾವಹಾರಿಕ) ಕೂಡಿ ಕಳೆಯುವ ನಿಯಾಮಕ ಕಾಲವೂ(ಅಖಂಡ) ನಾನೇ' (**ಅಹಮೇವ ಅಕ್ಷಯಃ ಕಾಲಃ**) ಎನ್ನುತ್ತಾನೆ ಶ್ರೀಕೃಷ್ಣ. ಮಹಾಕಾಲನ ಕೈಯಲ್ಲಿ ಖಂಡ ಕಾಲ; ಮಹಾವಿಷ್ಣುವಿನ ಕೈಯಲ್ಲಿ ಸುದರ್ಶನ ಚಕ್ರ (**ಕಾಲಚಕ್ರಂ ಭ್ರಮಿಸ್ತೀಕ್ಷ್ಣಂ ಸರ್ವಂ ನಿಷ್ಕರ್ಷಯಜ್ಜಗತ್–ಭಾಗವತ**). ಅದು ವೇಗವಾಗಿ ಸುತ್ತುತ್ತಲೇ ಇರುತ್ತದೆ. ಈ ಕಾಲಚಕ್ರ ಸುದರ್ಶನ (ಸುಂದರ, ಆಸ್ವಾದ್ಯ, ಅನುಭೂತಿಪರ). ಶಿವನೂ ಮಹಾಕಾಲನೇ. ಅವನ ಮೈತುಂಬ ಸುತ್ತಿಕೊಳ್ಳುವ ಸರ್ಪ ಕಾಲದ ಸಂಕೇತ. ಮನುಷ್ಯರು ಪ್ರಾಣಿಗಳು ನಡೆದಾಡುವಾಗ ಹೆಜ್ಜೆಗಳ ನಡುವಿನ ಅಂತರವನ್ನು ಕಾಣಬಹುದು. ಆದರೆ ಸರ್ಪ ಹರಿದು ಹೋಗುವುದರಿಂದ ಅದು ಕಾಲಸರ್ಪ. ಶಿವ ಕಾಲಭೈರವ, ಜೀವಿಯ ಸಾವಿನ ಮುಖ, ಹೆದರಿಕೆ ಹುಟ್ಟಿಸುವ (ಭೈರವ) ಮುಖ. ಜೀವಿಗೆ ಜನ್ಮಕೊಡುವ ಸೃಷ್ಟಿಮುಖ 'ಭವ'. ಆದ್ದರಿಂದ ಭವನೂ ಭೈರವನೂ ಒಂದೇ ಶಿವನ ಎರಡು ಮುಖ. ಎರಡರಲ್ಲೂ ಕಾಲಸರ್ಪ ಸುತ್ತಿಕೊಂಡೇ ಇರುವುದು. ಕಾಲಭೈರವಾಷ್ಟಕದಲ್ಲಿ ಬಳಸಲಾದ ವಿಶೇಷಣಗಳು ಕಾಲದ ವಿವಿಧ ಅವಸ್ಥೆ ಮತ್ತು ಪರಿಣಾಮಗಳ ಸಂಕೇತಗಳೆ ಆಗಿವೆ. ಭೂಮಿಯನ್ನು ಮಾತ್ರವಲ್ಲ ದಿಗ್ದಿಗಂತವನ್ನೂ ಕಾಲ ವ್ಯಾಪಿಸಿದೆ. ಅಲ್ಲೂ ಇದೇ ಜ್ಯೋತಿರ್ವರ್ಷ. ಆ ಕಾಲದ ಹರಿವು ಸರ್ಪದಂತಲ್ಲ. ಅದರ ಬೀಸು ದೊಡ್ಡದು. ಅದರ ಹರಿವು ಭವ್ಯವಾದ ರೆಕ್ಕೆ ಬೀಸಿ ಬರುವ ಗರುಡನ ಹಾರಾಟ. ಕಾಲಾತೀತನೂ ಕಾಲನಿಯಾಮಕನೂ ಆದ ಭಗವಂತನಿಗೆ ಗರುಡನೆಂಬ ಕಾಲಪಕ್ಷಿಯೇ ತೇರು. ಕಾವ್ಯದಲ್ಲೂ ಕಾಲಕ್ಕೆ ಹಕ್ಕಿಯೇ ರೂಪಕ (**ಹಕ್ಕಿ ಹಾರುತಿದೆ ನೋಡಿದಿರಾ–ಬೇಂದ್ರೆ**). ಈ ರೂಪಕ ವೇದದಲ್ಲೂ ಕಾಣುವುದು– **ಸುಪರ್ಣೋಽಸಿ ಗರುತ್ಮಾನ್ ತ್ರಿವೃತ್ತೇ ಶಿರಃ** (ತೈತ್ತಿರೀಯ ಸಂಹಿತಾ). ಕಾಲಪಕ್ಷಿ ಭೂತ ಭವಿಷ್ಯತ್ತುಗಳ ಸುಂದರ ರೆಕ್ಕೆಯನ್ನು ಹೊಂದಿದ್ದು ವರ್ತಮಾನದಲ್ಲಿ ಒಂದಾಗಿಸಿ ಹಾರುತ್ತದೆ. ಚಕ್ರ ಅರೆಕಾಲುಗಳೊಂದಿಗೆ ಒಂದಾಗಿ ಚಲಿಸುತ್ತದೆ. ಸರ್ಪ ಹೆಡೆ ಬಿಚ್ಚಿದಾಗ ಭೂತ–ಭವಿಷ್ಯತ್ತುಗಳು ಬಿಚ್ಚಿಕೊಳ್ಳುತ್ತವೆ. ಇಲ್ಲದಿದ್ದಲ್ಲಿ ವರ್ತಮಾನದಲ್ಲಿ ಒಂದಾಗಿ ಅಂತರ್ಭವಿಸುತ್ತವೆ. **ಒಟ್ಟಿನಲ್ಲಿ ಅಖಂಡ ಕಾಲ ಖಂಡವಾಗಿ ಕಾಣಿಸುತ್ತದೆ. ಖಂಡಕಾಲದ ಅಖಂಡವನ್ನು ಅನುಭವಿಸುವುದು, ಕಾಲವನ್ನೇರಿ ಕುಳಿತ ಕಾಲಾತೀತನನ್ನು ಪರಿಭಾವಿಸುವುದು ಒಂದು ಮಹಾ ಅನುಭವ.**